# ನಿವೇದನೆ

## ‘ಗೃಹ ಆರೋಗ್ಯ’ ಯೋಜನೆ: ಉತ್ತಮ ಉಪಕ್ರಮ ಪರಿಣಾಮಕಾರಿ ಅನುಷ್ಠಾನಕ್ಕೆ ಬೇಕು ಬದ್ಧತೆ

**ಜನರಿಗೆ ಅತ್ಯಗತ್ಯ ಆರೋಗ್ಯ ಸೇವೆಯನ್ನು ಸಕಾಲದಲ್ಲಿ ದೊರಕಿಸುವುದು ಯಾವುದೇ ಜನಪರ ಸರ್ಕಾರದ ಆದ್ಯ ಕರ್ತವ್ಯ. ಕರ್ನಾಟಕ ಸರ್ಕಾರ ಆರಂಭಿಸಿರುವ ‘ಗೃಹ ಆರೋಗ್ಯ’ ಯೋಜನೆಯನ್ನು ಜನರ ಆರೋಗ್ಯ ರಕ್ಷಣೆಗೆ ಕೈಗೊಂಡ ಒಂದು ಉತ್ತಮ ಉಪಕ್ರಮ ಎಂದು ಪರಿಗಣಿಸಬಹುದು.**



ಈಶ್ವರ್

ನಮ್ಮ ಬದುಕಿನ ಆಧಾರಸ್ತಂಭ ಆರೋಗ್ಯ. ದುಡಿಮೆಗೂ ನೆಮ್ಮದಿಗೂ ಎಲ್ಲದಕ್ಕೂ ಅದೇ ಆಧಾರ. ಅದು ಇಲ್ಲದೇ ಹೋದರೆ, ಬೇರೆ ಏನಿದ್ದರೂ ಇಲ್ಲದಂತೆಯೇ ಸರಿ. ರೋಗಬಾಧೆಯು ಬಡವ–ಬಲ್ಲಿದ, ಹೆಣ್ಣು–ಗಂಡು ಎಂಬ ಭೇದವಿಲ್ಲದೆ ಎಲ್ಲರನ್ನೂ ಕಾಡುವಂತಹದು. ಅದು ನೋವು, ನರಳಿಕೆಯನ್ನು ಮಾತ್ರ ತರುವುದಿಲ್ಲ; ಬದುಕಿನ ಸುಖ, ಸಂತೋಷ, ನೆಮ್ಮದಿ, ಉತ್ಸಾಹವನ್ನೂ ಉಡುಗಿಸಬಲ್ಲದು; ವ್ಯಕ್ತಿ ನೆಲೆಯಲ್ಲಿ ಮಾತ್ರವಲ್ಲದೆ, ಕೌಟುಂಬಿಕ ನೆಲೆಯಲ್ಲೂ ಕಂಪನಗಳನ್ನು ಉಂಟುಮಾಡಬಲ್ಲದು.

ಆರೋಗ್ಯ ಕಾಪಾಡಿಕೊಳ್ಳುವುದರ ಅಗತ್ಯ, ಮಹತ್ವ ಮತ್ತು ಮಾರ್ಗೋಪಾಯಗಳ ಬಗ್ಗೆ ಹೆಚ್ಚಿನವರಿಗೆ ಈಗಲೂ ಅರಿವಿನ ಕೊರತೆ ಇದೆ. ಕೊರತೆಯ ಪ್ರಮಾಣವು ನಗರ–ಪಟ್ಟಣ ಪ್ರದೇಶಗಳಿಗೆ ಹೋಲಿಸಿದರೆ, ಗ್ರಾಮೀಣ ಪ್ರದೇಶಗಳಲ್ಲಿ ಬಹಳ ಹೆಚ್ಚು ಎಂದೇ ಹೇಳಬಹುದು. ಬೆಳೆದ ಪರಿಸರ, ಉದಾಸೀನ, ಭಯ, ಜಿಗುಟುತನ ಎಲ್ಲವೂ ಇದಕ್ಕೆ ಕಾರಣವಾಗುತ್ತವೆ.

ಒಂದು ನಿರ್ದಿಷ್ಟ ಅವಧಿಗೆ ಅನುಗುಣವಾಗಿ ನಿಯಮಿತವಾಗಿ ಆರೋಗ್ಯ ತಪಾಸಣೆ ಮಾಡಿಸುವುದಾಗಲಿ, ಆರೋಗ್ಯದಲ್ಲಿ ಏನಾದರೂ ಏರುಪೇರಾಗುತ್ತಲೇ ವೈದ್ಯರ ಬಳಿ ಧಾವಿಸುವುದಾಗಲಿ, ವಿಮೆ ಸೌಲಭ್ಯ ಹೊಂದುವುದಾಗಲಿ ಈಗಲೂ ಅನೇಕರಿಗೆ ಅಗತ್ಯ ಅಂತ ಅನ್ನಿಸುತ್ತಿಲ್ಲ. ಆರೋಗ್ಯಕ್ಕೆ ಸಂಬಂಧಿಸಿದ ತೊಂದರೆಗಳು ಕಾಣಿಸಿಕೊಂಡ ಬಳಿಕ ಚಿಕಿತ್ಸೆ ಪಡೆಯುವುದಕ್ಕಿಂತ ಅವು ಬಾರದಂತೆ ತಡೆಯುವುದು ಉತ್ತಮ ಎಂಬ, ಎಲ್ಲರಿಗೂ ಎಲ್ಲ ಕಾಲಕ್ಕೂ ಸಲ್ಲುವ ಆರೋಗ್ಯಸೂತ್ರ ಪಾಲಿಸುವ ಮಂದಿ ತೀರಾ ಕಡಿಮೆ. ರೋಗ ಆರಂಭದಲ್ಲೇ ಪತ್ತೆಯಾದರೆ, ನಿಯಂತ್ರಣ ಮತ್ತು ಚಿಕಿತ್ಸೆಗೆ ಹೆಚ್ಚು ಅನುಕೂಲವಾಗುತ್ತದೆ. ಉಲ್ಬಣಗೊಂಡರೆ ‘ನೋವು’ ಹೆಚ್ಚು, ವೆಚ್ಚವೂ ಹೆಚ್ಚು.

ಆರೋಗ್ಯ ಸಮಸ್ಯೆಗಳು ಇತ್ತೀಚಿನ ದಿನಗಳಲ್ಲಿ ಹೆಚ್ಚಿಗೆ ಕಾಣಿಸಿಕೊಳ್ಳುತ್ತಿವೆ. ಆಧುನಿಕ ಜೀವನಶೈಲಿಯ ಜೊತೆ ನಂಟು ಹೊಂದಿರುವ ಮಧುಮೇಹ, ಏರು ರಕ್ತದೊತ್ತಡ, ಹೃದ್ರೋಗ, ಕ್ಯಾನ್ಸರ್‌ನಂತಹ ಕಾಯಿಲೆಗಳು ಒಂದೆಡೆ ಜನಸಮೂಹವನ್ನು ಕಂಗೆಡಿಸುತ್ತಿವೆ. ಮತ್ತೊಂದೆಡೆ, ಹೆಚ್ಚುತ್ತಿರುವ ಚಿಕಿತ್ಸಾ ವೆಚ್ಚಗಳು ಅವರನ್ನು ಹೈರಾಣಾಗಿಸುತ್ತಿವೆ. ಈ ಬಗೆಯ ಕಾಯಿಲೆಗಳು ಹಲವಾರು ಕುಟುಂಬಗಳನ್ನು ಸಾಲಬಾಧೆಗೆ ನೂಕಿವೆ, ಚೇತರಿಸಿಕೊಳ್ಳಲು ಸಾಧ್ಯವಾಗದಷ್ಟು ಮಟ್ಟಿಗೆ ಬಲವಾದ ಪೆಟ್ಟು ಕೊಟ್ಟಿವೆ.

ಆರೋಗ್ಯವು ಮನುಷ್ಯನ ಮೂಲಭೂತ ಹಕ್ಕು. ಬದುಕುವುದೆಂದರೆ ಹೇಗೆಹೇಗೋ ಬದುಕುವುದಲ್ಲ. ಆರೋಗ್ಯದಿಂದ ಬದುಕುವುದು. ಜನರಿಗೆ ಅತ್ಯಗತ್ಯ ಆರೋಗ್ಯ ಸೇವೆಯನ್ನು ಸಕಾಲದಲ್ಲಿ ದೊರಕಿಸುವುದು ಯಾವುದೇ ಜನಪರ ಸರ್ಕಾರದ ಆದ್ಯ ಕರ್ತವ್ಯ. ಕರ್ನಾಟಕ ಸರ್ಕಾರ ಆರಂಭಿಸಿರುವ ‘ಗೃಹ ಆರೋಗ್ಯ’ ಯೋಜನೆಯನ್ನು ಈ ದಿಸೆಯಲ್ಲಿ ನಾವು ಪರಿಭಾವಿಸಬೇಕಾಗಿದೆ. ಕೆಲವೊಂದು ಆರೋಗ್ಯ ಸಮಸ್ಯೆಗಳನ್ನು ಮನೆ ಬಾಗಿಲಲ್ಲಿಯೇ ಪತ್ತೆ ಮಾಡಿ, ಔಷಧ ವಿತರಿಸುವ ಉದ್ದೇಶವನ್ನು ಹೊಂದಿರುವ ಈ ಯೋಜನೆಯನ್ನು ಜನರ ಆರೋಗ್ಯ ರಕ್ಷಣೆಗೆ ಸರ್ಕಾರ ಕೈಗೊಂಡ ಒಂದು ಉತ್ತಮ ಉಪಕ್ರಮ ಎಂದು ಪರಿಗಣಿಸಬಹುದು.

ಈ ಯೋಜನೆಯು 2024ರ ಅಕ್ಟೋಬರ್‌ನಲ್ಲಿ ಚಾಲನೆ ಪಡೆದಿತ್ತು. ಕೋಲಾರ ಜಿಲ್ಲೆಯಲ್ಲಿ ಪ್ರಾಯೋಗಿಕವಾಗಿ ಆರಂಭವಾಗಿದ್ದ ಯೋಜನೆಯನ್ನು ಮುಂದಿನ ತಿಂಗಳಿಂದ ರಾಜ್ಯದಾದ್ಯಂತ ವಿಸ್ತರಿಸಲು ಆರೋಗ್ಯ ಇಲಾಖೆ ನಿರ್ಧರಿಸಿರುವುದು ಸ್ವಾಗತಾರ್ಹ. ಇದಕ್ಕಾಗಿ ವೈದ್ಯಕೀಯ ಸಿಬ್ಬಂದಿಗೆ ಅಗತ್ಯ ತರಬೇತಿಯನ್ನು ನೀಡಲಾಗಿದೆ. ಔಷಧ ಕಿಟ್‌ಗಳ ದಾಸ್ತಾನು ಕೂಡ ಆಗಿದೆ ಎಂದು ವರದಿಯಾಗಿದೆ.

ವೈದ್ಯರನ್ನು ಒಳಗೊಂಡ ತಂಡ ಪ್ರತಿ ಮನೆಗೂ ತೆರಳಿ, 30 ವರ್ಷ ಮೇಲ್ಪಟ್ಟ ಎಲ್ಲರನ್ನೂ ತಪಾಸಣೆಗೆ ಒಳಪಡಿಸಲಿದೆ. ಮಧುಮೇಹ ಮತ್ತು ಅಧಿಕ ರಕ್ತದೊತ್ತಡ ಸಮಸ್ಯೆ ಇರುವವರಿಗೆ ಮಾತ್ರೆಗಳನ್ನೂ ಪೂರೈಸಲಿದೆ. ಅಗತ್ಯ ಇದ್ದವರಿಗೆ ಗೃಹ ಆರೋಗ್ಯ ಯೋಜನೆಯಡಿ ಹೆಚ್ಚಿನ ಚಿಕಿತ್ಸೆಯನ್ನೂ ಒದಗಿಸುವ ಉದ್ದೇಶವನ್ನು ಯೋಜನೆ ಒಳಗೊಂಡಿದೆ. ಮೊದಲು ಗ್ರಾಮೀಣ ಪ್ರದೇಶದ ಮನೆಗಳಿಗೆ ಭೇಟಿ ನೀಡಿ ತಪಾಸಣೆ ನಡೆಸಿದ ಬಳಿಕ ನಗರದ ಮನೆಗಳಲ್ಲಿ ಕೂಡ ತಂಡ ತಪಾಸಣೆ ನಡೆಸಲಿದೆಯಂತೆ. ಬಾಯಿ ಕ್ಯಾನ್ಸರ್, ಗರ್ಭಕಂಠ ಕ್ಯಾನ್ಸರ್ ಹಾಗೂ ಸ್ತನ ಕ್ಯಾನ್ಸರ್‌ಗೆ ಸಂಬಂಧಿಸಿದಂತೆಯೂ ವೈದ್ಯರ ತಂಡ ತಪಾಸಣೆ ನಡೆಸಲಿರುವುದು ಇನ್ನೊಂದು ಮುಖ್ಯ ಅಂಶ.

‘ನಿಯಮಿತ ತಪಾಸಣೆ ಮತ್ತು ಮಾತ್ರೆಗಳ ವಿತರಣೆಯಿಂದ ಸಾಂಕ್ರಾಮಿಕವಲ್ಲದ ರೋಗಗಳ ನಿಯಂತ್ರಣ ಸಾಧ್ಯವಾಗಲಿದೆ’ ಎಂದು ಆರೋಗ್ಯ ಇಲಾಖೆಯ ಸಾಂಕ್ರಾಮಿಕವಲ್ಲದ ರೋಗಗಳ ವಿಭಾಗದ ಉಪನಿರ್ದೇಶಕ ಡಾ. ಜಿ. ಶ್ರೀನಿವಾಸ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಯೋಜನೆಯ ಉದ್ದೇಶ ಒಳ್ಳೆಯದೆ. ಅದರ ಬಗ್ಗೆ ತಕರಾರು ತೆಗೆಯುವಂತಹದು ಏನೂ ಇಲ್ಲ. ಆದರೆ ಅನುಷ್ಠಾನ ಹೇಗೆ ಆಗಲಿದೆ ಎಂಬುದರ ಮೇಲೆ ಫಲಿತಾಂಶ ನಿಂತಿದೆ. ಅದಕ್ಕೆ ಬೇಕಾಗಿರುವುದು ನಿಜವಾದ ಕಾಳಜಿ ಮತ್ತು ಬದ್ಧತೆ. ಆರೋಗ್ಯ ಇಲಾಖೆಯಿಂದ ಅದನ್ನು ನಿರೀಕ್ಷಿಸಬಹುದೇ?

■ ಎನ್‌. ಉದಯಕುಮಾರ್